# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (442) 389 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರ ರೂಪಿಸಿರುವ ವಿದ್ಯಾರ್ಥಿವೇತನ ಸಂಬಂಧ ಕಾರ್ಯಕ್ರಮಗಳು ಯಾವುದು; ಹಾಗೂ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ;</td><td>ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಕೇಂದ್ರ ಪುರಸ್ಕೃತ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.<br><br>2024-25 ಮತ್ತು 2025-26ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಈ ಕೆಳಕಂಡಂತೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗಿರುತ್ತದೆ.<br><br><table><tr><th>ವರ್ಷ</th><th>ಮಂಜೂರು ಮಾಡಲಾದ ವಿದ್ಯಾರ್ಥಿಗಳ ಸಂಖ್ಯೆ</th></tr><tr><td>2024-25</td><td>3,51,979</td></tr><tr><td>2025-26</td><td>3,05,455</td></tr></table><br>2025-26ನೇ ಸಾಲಿನಲ್ಲಿ ಅರ್ಜಿ ಸ್ವೀಕೃತಿ ಹಾಗೂ ಮಂಜೂರಾತಿ ಪ್ರಕ್ರಿಯೆ ಇನ್ನೂ ಚಾಲ್ತಿಯಲ್ಲಿರುತ್ತದೆ.</td></tr>
<tr><td>ಆ)</td><td>ಐ.ಎ.ಎಸ್ ಮತ್ತು ಕೆ.ಎ.ಎಸ್. ತರಬೇತಿಗೆ ಎಷ್ಟು ಸಂಸ್ಥೆಗೆ, ಯಾವ ಮಾನದಂಡದ ಆಧಾರದಲ್ಲಿ ಕಾರ್ಯಾದೇಶ ನೀಡಲಾಗಿದೆ. ಇದಕ್ಕಾಗಿ ಒದಗಿಸಿರುವ ಅನುದಾನದ ವಿವರ ನೀಡುವುದು.</td><td>ಇಂದಿರಾ ಗಾಂಧಿ ವೃತ್ತಿ ಅಭಿವೃದ್ಧಿ ಕೇಂದ್ರ, ಈ ಹಿಂದೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರವು 2024-25ನೇ ಸಾಲಿಗೆ E-Procurement Portal ಮೂಲಕ ಐ.ಎ.ಎಸ್ ಮತ್ತು ಕೆ.ಎ.ಎಸ್. ಪೂರ್ವಭಾವಿ ಪರೀಕ್ಷಾ ತರಬೇತಿಯನ್ನು ನೀಡಲು ನುರಿತ ಸಂಸ್ಥೆಗಳನ್ನು ಗುರುತಿಸಿ ನೋಂದಾಯಿಸಲು E-Tender ಗಳನ್ನು ಆಹ್ವಾನಿಸಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನುರಿತ ತರಬೇತಿಯನ್ನು ಒದಗಿಸುವ ನಿಟ್ಟಿನಲ್ಲಿ ನವದೆಹಲಿ, ಹೈದರಾಬಾದ್, ಬೆಂಗಳೂರು ಹಾಗೂ ಕರ್ನಾಟಕದ ಇತರೆ ಭಾಗಗಳಲ್ಲಿರುವ ನುರಿತ ತರಬೇತಿ ಸಂಸ್ಥೆಗಳಿಗೆ KTPP ನಿಯಮದಡಿಯಲ್ಲಿ ನಿರ್ದಿಷ್ಟ ತರಬೇತಿಗೆ ಅವಶ್ಯವಿರುವ ಮಾನದಂಡ (Technical Criteria)ಗಳನ್ನು ಅಳವಡಿಸಿ, E-Tender ಗಳನ್ನು ಆಹ್ವಾನಿಸಿ ನಿಯಮಾನುಸಾರ ಆಯ್ಕೆ ಮಾಡಲಾಗಿರುತ್ತದೆ. ಸದರಿ ಟೆಂಡರ್‌ಗಳಲ್ಲಿ ತರಬೇತಿ ಸಂಸ್ಥೆಗಳು ಹೊಂದಿರುವ ಅನುಭವ, ಆರ್ಥಿಕ ಸಾಮರ್ಥ್ಯ, ತರಬೇತಿ ಸಂಸ್ಥೆಗಳ ಫಲಿತಾಂಶ, ಮೂಲಭೂತ ಸೌಕರ್ಯ ಮುಂತಾದ ಹಲವಾರು</td></tr>
</table>

---2

<table>
<tr>
<td></td>
<td></td>
<td>ಮಾನದಂಡಗಳನ್ನು ಅಳವಡಿಸಲಾಗುತ್ತದೆ. ಭಾಗವಹಿಸಿದ ತರಬೇತಿ ಸಂಸ್ಥೆಗಳಲ್ಲಿ ನಿಯಮಾನುಸಾರ ಷರತ್ತುಗಳನ್ನು ಪೂರೈಸಿ ಆಯ್ಕೆಯಾದ ತರಬೇತಿ ಸಂಸ್ಥೆಗಳನ್ನು ಸರ್ಕಾರದಿಂದ ಎಂಪಾನಲ್ ಮಾಡಿಕೊಳ್ಳಲಾಗುತ್ತದೆ. ಎಂಪಾನಲ್ ಆದ ಸಂಸ್ಥೆಗಳನ್ನು ಅರ್ಹ ಅಭ್ಯರ್ಥಿಗಳೇ ಕೌನ್ಸಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ಇದಕ್ಕಾಗಿ ಒದಗಿಸಲಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಕೋರ್ಸ್</th><th>ವರ್ಷ</th><th>ನೋಂದಾಯಿಸಿದ ತರಬೇತಿ ಸಂಸ್ಥೆಗಳ ಸಂಖ್ಯೆ</th><th>ಅನುದಾನ /ವೆಚ್ಚ (ರೂ. ಲಕ್ಷಗಳಲ್ಲಿ)</th></tr>
<tr><td>01</td><td>UPSC/IAS</td><td rowspan="2">2024-25</td><td>22</td><td>932.02</td></tr>
<tr><td>02</td><td>KAS</td><td>28</td><td>661.00</td></tr>
</table>
</td>
</tr>
<tr>
<td>ಇ)</td>
<td>ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದೇಶಿ ವ್ಯಾಸಂಗಕ್ಕೆ ಎಷ್ಟು ಅರ್ಜಿಗಳು ಆಹ್ವಾನಿತವಾಗಿದ್ದವು: ಇಲ್ಲಿಯವರೆಗೆ ವಿದೇಶಿ ವ್ಯಾಸಂಗಕ್ಕಾಗಿ ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ.</td>
<td>
<table>
<tr><th>ಕ್ರ. ಸಂ</th><th>ಕೋರ್ಸ್</th><th>ವರ್ಷ</th><th>ಆನ್‌ಲೈನ್ ಮೂಲಕ ಸ್ವೀಕೃತ ಗೊಂಡ ಅರ್ಜಿ ಗಳ ಸಂಖ್ಯೆ)</th><th>ಅನುಮೋದನೆ ಗೊಂಡ ಅರ್ಜಿಗಳ ಸಂಖ್ಯೆ</th><th>ಒದಗಿ ಸಲಾದ ಅನುದಾನ (ರೂ. ಕೋಟಿಗಳಲ್ಲಿ)</th></tr>
<tr><td>01</td><td rowspan="2">ವಿದೇಶಿ ವ್ಯಾಸಂಗ</td><td>2024-25</td><td>345</td><td>246</td><td>105.00</td></tr>
<tr><td>02</td><td>2025-26</td><td>348</td><td>268</td><td>109.00</td></tr>
</table>
</td>
</tr>
</table>

**ಸಕಇ 53 ಎಸ್‌ಎಲ್‌ಪಿ 2026**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**